KACD520001262026

**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
ಹೊಸದುರ್ಗ.

**ದಿನಾಂಕ 23 ನೇ ಜುಲೈ 2026**

**ಪಿ.ಮತ್ತು.ಎಸ್.ಸಿ ಸಂಖ್ಯೆಃ 01/2026**

**ಅರ್ಜಿದಾರರು**

1. ಮೇಘನಾ ಬಿ. ಎನ್ ತಂದೆ ನೇಮಿರಾಜ್ ಬಿ.ಕೆ.
   ವಯಸ್ಸು ಸುಮಾರು 38 ವರ್ಷ,

2. ನೇಹ ಬಿ. ಎನ್ ತಂದೆ ನೇಮಿರಾಜ್ ಎ. ಎನ್,
   ವಯಸ್ಸು ಸುಮಾರು 31 ವರ್ಷ,

3. ಬ್ರಹ್ಮೇಶ್ ಬಿ.ಎನ್ ತಂದೆ ನೇಮಿರಾಜ್ ಎ.ಎನ್,
   ವಯಸ್ಸು ಸುಮಾರು 26 ವರ್ಷ,
   ಎಲ್ಲರ ವಾಸಃ ಆಶ್ರಮ ರಸ್ತೆ, ವಿಜಯನಗರ ಬಡಾವಣೆ,
   ಹೊಸದುರ್ಗ, ಚಿತ್ರದುರ್ಗ ಜಿಲ್ಲೆ.

**(ಅರ್ಜಿದಾರರ ಪರ ವಕೀಲರು - ಶ್ರೀ ಸುಧಾನವ ಎನ್.ಕೆ )**

**ವಿರುದ್ಧ**

**ಎದುರುದಾರರುಃ-**

........................ಇಲ್ಲ...................

-:oOo:-

# ಆದೇಶ

ಅರ್ಜಿದಾರರು ಈ ಅರ್ಜಿಯನ್ನು ಭಾರತೀಯ ಉತ್ತರಾಧಿಕಾರ ಕಾಯ್ದೆ 1925 ರ ಕಲಂ 372 ರ ಅಡಿಯಲ್ಲಿ ಸಲ್ಲಿಸಿ, ತಮಗೆ ಉತ್ತರಾಧಿಕಾರ ಪ್ರಮಾಣಪತ್ರವನ್ನು ನೀಡಬೇಕೆಂದು ಕೋರಿರುತ್ತಾರೆ.

**2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ-**

ಅರ್ಜಿದಾರರ ತಂದೆ-ತಾಯಿಗಳಾದ ನೇಮಿರಾಜ್ ಬಿ.ಕೆ ಮತ್ತು ನಂದಾ ಬಿ.ಎನ್ ಇವರು ದಿನಾಂಕಃ 22-03-2021 ರಂದು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. 1 ಮತ್ತು 2 ನೇ ಅರ್ಜಿದಾರರು ಮೃತರ ಹೆಣ್ಣುಮಕ್ಕಳು ಹಾಗೂ 3 ನೇ ಅರ್ಜಿದಾರ ಮೃತರ ಮಗ. ಅರ್ಜಿದಾರರ ತಂದೆ ವ್ಯಾಪಾರಿಯಾಗಿದ್ದು, ತನ್ನ ಜೀವಿತಾವಧಿಯಲ್ಲಿ ಆದಿತ್ಯಾ ಬಿರ್ಲಾ ಮನಿ ಲಿಮಿಟೆಡ್ ಮತ್ತು ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ನಲ್ಲಿ ಅರ್ಜಿಯ ತಪಶೀಲಿನಲ್ಲಿ ಹೇಳಿದ ಆಸ್ತಿಗಳ ಮೇಲೆ ಹಣ ತೊಡಗಿಸಿರುತ್ತಾನೆ. ಅರ್ಜಿದಾರರು ಅರ್ಜಿಯ ತಪಶೀಲಿನ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಲು ಸ್ಟಾಕ್ ಬ್ರೋಕರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ, ಮೃತನು ಯಾವುದೇ ವ್ಯಕ್ತಿಯನ್ನು ನಾಮಿನಿಯಾಗಿ ಮಾಡಿರಲಿಲ್ಲ. ಆದ್ದರಿಂದ, ಸ್ಟಾಕ್ ಬ್ರೋಕರ್ ಇವರು ಉತ್ತರಾಧಿಕಾರಪ್ರಮಾಣಪತ್ರವನ್ನು ಕೊಡದೇ ಅರ್ಜಿದಾರರ ಹೆಸರಿಗೆ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿರುತ್ತಾರೆ. ಅರ್ಜಿದಾರರು ಮಾತ್ರ ಮೃತ ತಮ್ಮ ತಂದೆ-ತಾಯಿಗಳ ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ಆದ್ದರಿಂದ, ಮೃತನ ಅರ್ಜಿಯ ತಪಶೀಲಿನ ಆಸ್ತಿಯನ್ನು ಅರ್ಜಿದಾರರಿಗೆ ವರ್ಗಾವಣೆ ಮಾಡಲು ಉತ್ತರಾಧಿಕಾರ ಪ್ರಮಾಣಪತ್ರ ನೀಡಬೇಕೆಂದು ಅರ್ಜಿದಾರರು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ಪತ್ರಿಕಾ ಪ್ರಕಟಣೆಯ ಮೂಲಕ ಪ್ರಕಟಿಸಲಾಗಿದ್ದರೂ ಸಹ, ಎದುರುದಾರರಾಗಿ ಯಾರೂ ಹಾಜರಾಗಿರುವುದಿಲ್ಲ.

**4.** ಅರ್ಜಿಯಲ್ಲಿ ಆರೋಪಿಸಿರುವಂತಹ ಅಂಶಗಳನ್ನು ಸಾಭೀತುಪಡಿಸಲು 3ನೇ ಅರ್ಜಿದಾರ ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, 6 ದಾಖಲೆಗಳನ್ನು ನಿ.ಪಿ-1 ರಿಂದ 6 ಎಂದು ಗುರುತಿಸಿಕೊಂಡು ತಮ್ಮ ಪರ ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ.

**5**. ವಾದವನ್ನು ಆಲಿಸಲಾಯಿತು. ಅರ್ಜಿ ಹಾಗೂ ಅರ್ಜಿದಾರರ ಪರ ಇರುವ ಸಾಕ್ಷಿಯನ್ನು ಅವಲೋಕಿಸಲಾಗಿ, ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ:-

ಅಂಶ-1 - ಅರ್ಜಿದಾರರು ಮೃತ ನೇಮಿರಾಜ್ ಬಿ.ಕೆ ಇವನ ವಾರಸುದಾರರು ಎಂದು ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಪಡೆಯಲು ಅರ್ಹರು ಎನ್ನುವುದನ್ನು ಸಾಭೀತುಪಡಿಸಿದ್ದಾರೆಯೇ?

ಅಂಶ-2 - ಯಾವ ಆದೇಶ?

**6.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ:

ಅಂಶ-1 - ಸಕಾರಾತ್ಮಕವಾಗಿ ಮತ್ತು,

ಅಂಶ-2 - ಅಂತಿಮ ಆದೇಶದಂತೆ:

**ಕಾರಣಗಳು**

**7.** **ಅಂಶ-1**- ಅರ್ಜಿದಾರರು ಅರ್ಜಿಯಲ್ಲಿ ಆರೋಪಿಸಿದಂತೆ, ಅರ್ಜಿದಾರರ ತಂದೆ-ತಾಯಿಗಳಾದ ನೇಮಿರಾಜ್ ಬಿ.ಕೆ ಮತ್ತು ನಂದಾ ಬಿ.ಎನ್ ಇವರು ದಿನಾಂಕ: 22-

03-2021 ರಂದು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಅರ್ಜಿದಾರರ ತಂದೆ ವ್ಯಾಪಾರಿಯಾಗಿದ್ದು, ತನ್ನ ಜೀವಿತಾವಧಿಯಲ್ಲಿ ಆದಿತ್ಯಾ ಬಿರ್ಲಾ ಮನಿ ಲಿಮಿಟೆಡ್ ಮತ್ತು ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ನಲ್ಲಿ ಅರ್ಜಿಯ ತಪಶೀಲಿನಲ್ಲಿ ಹೇಳಿದ ಆಸ್ತಿಗಳ ಮೇಲೆ ಹಣ ತೊಡಗಿಸಿರುತ್ತಾನೆ. ಅರ್ಜಿದಾರರು ಅರ್ಜಿಯ ತಪಶೀಲಿನ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾವಣೆ ಮಾಡಲು ಸ್ಟಾಕ್ ಬ್ರೋಕರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ, ಮೃತನು ಯಾವುದೇ ವ್ಯಕ್ತಿಯನ್ನು ನಾಮಿನಿಯಾಗಿ ಮಾಡಿರಲಿಲ್ಲ. ಆದ್ದರಿಂದ, ಸ್ಟಾಕ್ ಬ್ರೋಕರ್ ಇವರು ಉತ್ತರಾಧಿಕಾರಪ್ರಮಾಣಪತ್ರವನ್ನು ಕೊಡದೇ ಅರ್ಜಿದಾರರ ಹೆಸರಿಗೆ ವರ್ಗಾವಣೆ ಮಾಡುವುದಿಲ್ಲವೆಂದು ಹೇಳಿರುತ್ತಾರೆ. ಅರ್ಜಿದಾರರು ಮಾತ್ರ ಮೃತ ತಮ್ಮ ತಂದೆ-ತಾಯಿಗಳ ಕಾನೂನುಬದ್ಧ ವಾರಸುದಾರರಾಗಿರುತ್ತಾರೆ ಎಂದು ಆರೋಪಿಸಿರುವಂತಹ ಅಂಶಗಳನ್ನು ಸಾಭೀತುಪಡಿಸಲು, 3 ನೇ ಅರ್ಜಿದಾರನು ತಾನು ಪಿ.ಡಬ್ಲೂ-1 ಎಂದು ವಿಚಾರಣೆಗೆ ಒಳಪಟ್ಟು, ತನ್ನ ಮುಖ್ಯ ವಿಚಾರಣೆಯಲ್ಲಿ ಅರ್ಜಿಯ ಅಂಶಗಳಿಗೆ ಪೂರಕವಾಗಿ ಸಾಕ್ಷಿಯನ್ನು ನುಡಿದಿರುತ್ತಾನೆ.

**8**. ಅರ್ಜಿದಾರರ ಪರ ನಿಶಾನೆ ಎಂದು ಗುರುತಿಸಿಕೊಂಡಂತಹ ದಾಖಲೆಗಳನ್ನು ಅವಲೋಕಿಸಲಾಗಿ, ನಿ.ಪಿ-1 ವಂಶವೃಕ್ಷ, ನಿಪಿ-2 ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ, ನಿಪಿ-3 ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ನ ಸ್ಟೇಟ್‌ಮೆಂಟ್, ನಿಪಿ-4 ಆದಿತ್ಯ ಬಿರ್ಲಾ ಮನಿ ಲಿಮಿಟೆಡ್ ಸ್ಟೇಟ್ ಮೆಂಟ್ ,ನಿಪಿ-5 ನೇಮಿರಾಜ್ ಬಿ.ಕೆ ಇವರ ಮರಣ ಪ್ರಮಾಣ ಪತ್ರ, ಹಾಗೂ ನಿಪಿ-6 ನಂದ ಬಿ.ಎನ್ ಇವಳ ಮರಣ ಪ್ರಮಾಣ ಪತ್ರ ಇರುತ್ತದೆ.

**9**. ನಿಪಿ-1 ಮತ್ತು 2 ರಂತೆ ಅರ್ಜಿದಾರರು ಮೃತ ನೇಮಿರಾಜ್ ಬಿ.ಕೆ ಹಾಗೂ ಮೃತ ನಂದ ಬಿ.ಎನ್ ಇವರ ಮಕ್ಕಳು ಎಂದು ಕಂಡುಬರುತ್ತದೆ. ಅಲ್ಲದೆ, ಸದರಿ ನೇಮಿರಾಜ್ ಬಿ.ಕೆ ಇವನು ನಿಪಿ-5 ರಂತೆ ದಿನಾಂಕಃ 22-03-2021 ರಂದು ಹಾಗೂ

ನಂದ ಬಿ.ಎನ್ ಇವಳು ನಿಪಿ-6 ರಂತೆ ದಿನಾಂಕಃ 22-03-2021 ರಂದು ಮೃತಪಟ್ಟಿರುವುದು ಕಂಡುಬರುತ್ತದೆ. ಅಲ್ಲದೆ, ಸದರಿ ಮೃತ ನೇಮಿರಾಜ್ ಬಿ.ಕೆ ಇವನು ಅರ್ಜಿಯ ತಪಶೀಲಿನ ಆಸ್ತಿಗಳ ಮೇಲೆ ನಿಪಿ-3 ರಂತೆ ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ನಲ್ಲಿ ಹಾಗೂ ನಿಪಿ-4 ರಂತೆ ಆದಿತ್ಯಾ ಬಿರ್ಲಾ ಮನಿ ಲಿಮಿಟೆಡ್ ನಲ್ಲಿ ಹಣ ತೊಡಗಿಸಿರುವುದು ಕಂಡುಬರುತ್ತದೆ. ಅಲ್ಲದೆ, ಆ ಕುರಿತು ಪಿ.ಡಬ್ಲೂ-1 ರವರು ನಿ.ಪಿ-1 ರಿಂದ 6 ಕ್ಕೆ ಪೂರಕವಾಗಿ ಸಾಕ್ಷಿಯನ್ನು ನುಡಿದಿರುವುದರಿಂದ, ಮತ್ತು ಪೇಪರ್ ಪ್ರಕರಣೆಯಾದರೂ ಸಹ, ಯಾರೂ ಸಹ ಎದುರುದಾರರಾಗಿ ಹಾಜರಾಗಿ ತಕರಾರನ್ನು ಸಲ್ಲಿಸಿಲ್ಲ. ಆದ್ದರಿಂದ, ಅರ್ಜಿಯಲ್ಲಿ ಆರೋಪಿಸಿರುವಂತಹ ಅಂಶಗಳು ಹಾಗೂ ಪಿ.ಡಬ್ಲೂ-1 ರವರ ಮೌಖಿಕ ಮತ್ತು ದಾಖಲಾತಿ ಸಾಕ್ಷಿ ಪ್ರಶ್ನಿಸಿದೇ ಹಾಗೇ ಉಳಿದುಕೊಂಡಂತಹ ಸಾಕ್ಷಿಯಾಗಿರುವುದರಿಂದ, ಸದರಿ ಸಾಕ್ಷಿಯನ್ನು ನಂಬದೇ ಇರಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ, ಅರ್ಜಿದಾರರು ಮೃತ ನೇಮಿರಾಜ್ ಬಿ.ಕೆ ಇವನ ಮಕ್ಕಳು ಇರುವುದರಿಂದ, *ಹಿಂದೂ ಉತ್ತರಾಧಿಕಾರ ಅಧಿನಿಯಮ 1956 ರ ಕಲಂ 8 ರ ಅಡಿಯಲ್ಲಿ ಹೇಳಿದಂತೆ, 1 ನೇ ವರ್ಗದ ವಾರಸುದಾರರು ಇರುತ್ತಾರೆ.* ಆದ್ದರಿಂದ, ಮೃತ ನೇಮಿರಾಜ್ ಬಿ.ಕೆ ಇವನಿಗೆ ಸಂಬಂಧಪಟ್ಟಂತಹ ಅರ್ಜಿಯ ತಪಶೀಲಿನ ಆಸ್ತಿಗಳ ವರ್ಗಾವಣೆಯ ಸಲುವಾಗಿ, ಅರ್ಜಿದಾರರು ಮೃತ ನೇಮಿರಾಜ್ ಬಿ.ಕೆ ಇವನ ಉತ್ತರಾಧಿಕಾರ ಪ್ರಮಾಣಪತ್ರವನ್ನು ಪಡೆಯಲು ತಾವು ಅರ್ಹರು ಎನ್ನುವುದನ್ನು ಸಾಭೀತುಪಡಿಸಿರುತ್ತಾರೆ. ಆದ್ದರಿಂದ, ಅರ್ಜಿದಾರರು ಮೃತ ನೇಮಿರಾಜ್ ಬಿ.ಕೆ ಇವನ ಕಾನೂನು ಬದ್ದ 1 ನೇ ವರ್ಗದ ವಾರಸುದಾರರು ಇದ್ದು, ಅದರಂತೆ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ಪಡೆಯಲು ಅರ್ಹರು ಎಂದು ತೀರ್ಮಾನಿಸಿ, **ಅಂಶ-1 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**10**. **<u>ಅಂಶ-2</u>** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಂದಾಗಿ ಈ ಕೆಳಕಂಡಂತೆ ಮಾಡಿದೆ:

**<u>ಆದೇಶ</u>**

ಅರ್ಜಿದಾರರು ಭಾರತೀಯ ಉತ್ತರಾಧಿಕಾರ ಕಾಯ್ದೆ 1925 ರ ಕಲಂ 372 ರ ಅಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರು ಮೃತ ನೇಮಿರಾಜ್ ಬಿ.ಕೆ ಇವನ ಹೆಸರಿನಲ್ಲಿರುವ ಅರ್ಜಿಯ ತಪಶೀಲಿನ ಆಸ್ತಿಗಳನ್ನು ತಮ್ಮ ಹೆಸರಿಗೆ ವರ್ಗಾವಣೆ ಪಡೆಯಲು ಉತ್ತರಾಧಿಕಾರ ಪ್ರಮಾಣಪತ್ರವನ್ನು ಪಡೆಯಲು ಅರ್ಹರೆಂದು ಆದೇಶಿಸಿದೆ.

ಸ್ಟ್ಯಾಂಪ್ ಪೇಪರನ್ನು ತೆಗೆದುಕೊಂಡ ನಂತರ, ಉತ್ತರಾಧಿಕಾರ ಪ್ರಮಾಣಪತ್ರವನ್ನು ನೀಡಲು ಕಛೇರಿಗೆ ನಿರ್ದೇಶಿಸಿ ಆದೇಶಿಸಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ, ಇಂದು ದಿನಾಂಕ **23ನೇ ಜುಲೈ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**(ವೈ. ಕೆ. ಬೇನಾಳ)**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಹೊಸದುರ್ಗ.**

**ಅನುಭಂದ**

ಅರ್ಜಿದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ

ಪಿ.ಡಬ್ಲೂ-1 - ಬ್ರಹ್ಮೇಶ್ ಬಿ.ಎನ್ ತಂದೆ ನೇಮಿರಾಜ್ ಬಿ.ಕೆ

ಅರ್ಜಿದಾರರ ಪರವಾಗಿ ಗುರುತಿಸಲಾದ ದಾಖಲೆಗಳು

| | |
|---|---|
| ನಿಪಿ-1 | ವಂಶವೃಕ್ಷ |
| ನಿಪಿ-2 | ಮೃತರ ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ |
| ನಿಪಿ-3 | ಜಿಯೋಜಿತ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್ ಸ್ಟೇಟ್ ಮೆಂಟ್ |
| ನಿಪಿ-4 | ಆದಿತ್ಯ ಬಿರ್ಲಾ ಮನಿ ಲಿಮಿಟೆಡ್ ಸ್ಟೇಟ್ ಮೆಂಟ್ |
| ನಿಪಿ-5 | ನೇಮಿರಾಜ್ ಬಿ.ಕೆ ಇವನ ಮರಣ ಪ್ರಮಾಣ ಪತ್ರ |
| ನಿಪಿ-6 | ನಂದ ಬಿ.ಎನ್ ಇವಳ ಮರಣ ಪ್ರಮಾಣ ಪತ್ರ |

ಎದುರುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿ

.....................................ಇಲ್ಲ...........................

ಎದುರುದಾರರ ಪರ ಗುರುತಿಸಲಾದ ದಾಖಲೆಗಳು

.....................................ಇಲ್ಲ...........................

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಹೊಸದುರ್ಗ.**

YAMANOORAPPA KANAKAPPA BENAL

Digitally signed by YAMANOORAPPA KANAKAPPA BENAL
Date: 2026.07.23 17:52:14 +0530